| Published Date: | 11 Aug 2018 | Publication: | Vishwavani (Kannada) |
| --- | --- | --- | --- |
| Edition: | Bangalore | Page No: | 10 |
| MAV/CCM: | 33816/28.18 | Circulation: | 72000 |

# ಟಿಸಿಎಸ್ ಕ್ವಿಜ್‌ನಲ್ಲಿ ಸುಚಿತ್, ರಾಜಶಂಕರ್‌ಗೆ ಪ್ರಶಸ್ತಿ



ಟಿಸಿಎಸ್ ಕ್ವಿಜ್‌ನಲ್ಲಿ ಜಯಗಳಿಸಿದ ಸುಚಿತ್ ಹೆಗಡೆ ಮತ್ತು ರಾಜಶಂಕರ್ ಅವರಿಗೆ ಟಿಸಿಎಸ್ ಬೆಂಗಳೂರಿನ ಅಧ್ಯಕ್ಷ ನಾಗರಾಜ್ ಇಜಾರಿ ಪ್ರಶಸ್ತಿ ಪ್ರದಾನ ಮಾಡಿದರು.

**ಬೆಂಗಳೂರು:** ತಾಂತ್ರಿಕ ಕೌಶಲದ ಕುರಿತು ಮಕ್ಕಳಲ್ಲಿ ಅರಿವು ಮೂಡಿಸಲು ಐಟಿ ಸೇವಾ ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಆಯೋಜಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ನಗರದ ವಿವಿಧ ಶಾಲೆಗಳಿಂದ ಒಂದು ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದರು.

ವಿಶೇಷವಾಗಿ ಟಿಸಿಎಸ್ 50 ಸುತ್ತಿನ ರಸಪ್ರಶ್ನೆ ಸ್ಪರ್ಧೆಯಲ್ಲಿ ನಾನಾ ತಾಂತ್ರಿಕ ಬೆಳವಣಿಗೆಗಳ ಕುರಿತು ಚರ್ಚಿಸಲಾಯಿತು. ಲಿಖಿತ ಪರೀಕ್ಷೆಯಲ್ಲಿ ಆರು ಸ್ಥಾನ ಗಳಿಸಿದ ತಂಡಗಳು ಪ್ರಾದೇಶಿಕ ಹಂತದ ಸ್ಪರ್ಧೆಗೆ ಆಯ್ಕೆಯಾದವು. ಪ್ರಾದೇಶಿಕ ಸುತ್ತಿನ ಅಂತಿಮ ಸ್ಪರ್ಧೆಯಲ್ಲಿ ಐದು ಸುತ್ತಿನ ಸ್ಪರ್ಧೆಗಳ ನಂತರ ಸೇಂಟ್ ಪಾಲ್ ಇಂಗ್ಲಿಷ್ ಶಾಲೆಯಿಂದ ಸುಚಿತ್ ಹೆಗಡೆ ಮತ್ತು ರಾಜಶಂಕರ್ ಪ್ರಶಸ್ತಿಗಳಿಸಿದರು. ಪ್ರಾದೇಶಿಕ ಸುತ್ತಿನ ಪ್ರಶಸ್ತಿ 60 ಸಾವಿರ ರುಪಾಯಿ ಮೌಲ್ಯದ ಗಿಫ್ಟ್ ವೋಚರ್ ನೀಡಲಾಯಿತು. ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲೆ ಪ್ರತಿನಿಧಿಸಿದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ರನ್ನರ್ ಅಪ್ ಆದರು. ಇವರಿಗೆ 40 ಸಾವಿರ ರುಪಾಯಿ ಮೌಲ್ಯದ ಗಿಫ್ಟ್ ವೋಚರ್ ನೀಡಲಾಯಿತು. ಅಂತಿಮ ಸುತ್ತು ಪ್ರವೇಶಿಸಿದ ಟಿಸಿಎಸ್‌ನ ಆರು ವಿದ್ಯಾರ್ಥಿಗಳಿಗೆ ಜಿಮ್ ಬ್ಯಾಗ್, ಮ್ಯೂಸಿಕ್ ಟಾರ್ಚ್, ಬ್ಲೂಟೂತ್ ಸ್ಪೀಕರ್, ವೈರ್‌ಲೆಸ್ ಔಟ್‌ಡೋರ್ ಸ್ಪೀಕರ್ ಮತ್ತು ಟಿಸಿಎಸ್50 ಪೆನ್‌ಡ್ರೈವ್ ನೀಡಲಾಯಿತು. ವಿಜೇತರು ಪ್ರಾದೇಶಿಕ ಹಂತದ ವಿಜೇತರೊಂದಿಗೆ ಅಂತಿಮ ಹಂತದ ಸ್ಪರ್ಧೆಯಲ್ಲಿ ಬೆಂಗಳೂರನ್ನು ಪ್ರತಿನಿಧಿಸುವರು.

1/1